ಸಣ್ಣ ಉಳಿತಾಯ ಇಲಾಖೆಯಿಂದ ಸಂಗ್ರಹವಾದ ಹಣ

343(549) - ಶ್ರೀ ಕೌಜಲಗಿ ಮಹಂತೇಶ್ ಶಿವಾನಂದ್ (ಬೈಲಹೊಂಗಲ): ಮಾನ್ಯ ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಸಣ್ಣ ಉಳಿತಾಯ ಇಲಾಖೆಯಿಂದ ಎಷ್ಟು ಹಣ ಸಂಗ್ರಹವಾಗಿರುತ್ತದೆ? ಅದರಲ್ಲಿ ಬೆಳಗಾವಿ ಜಿಲ್ಲೆಯಿಂದ ಸಂಗ್ರಹವಾದ ಹಣ ಎಷ್ಟು?

ಆ) ರಾಜ್ಯದಲ್ಲಿ ಯಾವ ಯಾವ ಜಿಲ್ಲೆಯಿಂದ ಎಷ್ಟು ಎಷ್ಟು ಹಣ ಸಂಗ್ರಹವಾಗಿರುವುದು?

ಶ್ರೀ ಬಾಬುರಾವ್ ಚಿಂಚಸನೂರ್ (ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮೆ ರಾಜ್ಯ ಸಚಿವರು):

i) ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಆದ ಸಂಗ್ರಹಣೆ ವಿವರ

(ರೂ. ಕೋಟಿಗಳಲ್ಲಿ)

ವರ್ಷಗಳು	ಒಟ್ಟು	ನಿವ್ವಳ
1999-2000	3156.08	1600.69
2000-2001	3748.00	1801.58
2001-2002	3578.58	1692.65

ii) ಕಳೆದ 3 ವರ್ಷಗಳಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಆದ ಸಂಗ್ರಹಣೆ ವಿವರ

(ರೂ. ಕೋಟಿಗಳಲ್ಲಿ)

ವರ್ಷಗಳು	ಒಟ್ಟು	ನಿವ್ವಳ
1999-2000	210.15	103.07
2000-2001	241.16	106.38
2001-2002	218.75	100.12

ಆ) ರಾಜ್ಯದಲ್ಲಿ ವಿವಿಧ ಜಿಲ್ಲೆಗಳಿಂದ ಆದ ಸಂಗ್ರಹಣೆಯ ವಿವರಗಳ ಪಟ್ಟಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಅನುಬಂಧ

ಕ್ರ. ಸಂ.	ಜಿಲ್ಲೆಗಳು	1999-2000 ಒಟ್ಟು	1999-2000 ನಿವ್ವಳ	2000-2001 ಒಟ್ಟು	2000-2001 ನಿವ್ವಳ	2001-2001 ಒಟ್ಟು	2001-2001 ನಿವ್ವಳ
						(ರೂ. ಕೋಟಿಗಳಲ್ಲಿ)	
1)	ಬೆಂಗಳೂರು (ನ)	1045.53	574.64	1284.31	660.78	1261.81	703.03
2)	ಬೆಂಗಳೂರು (ಗ್ರಾ)	55.52	25.13	74.96	34.06	70.91	33.53
3)	ತುಮಕೂರು	73.35	36.11	76.16	30.81	70.89	28.64
4)	ಕೋಲಾರ	96.34	45.01	123.57	62.31	110.26	45.54
5)	ಶಿವಮೊಗ್ಗ	122.56	54.53	133.78	65.86	150.83	70.77
6)	ಚಿತ್ರದುರ್ಗ	44.19	20.64	49.05	18.08	46.25	17.90
7)	ದಾವಣಗೆರೆ	52.73	22.53	64.31	30.01	75.89	32.72
8)	ಚಿಕ್ಕಮಗಳೂರು	54.03	25.62	58.54	24.15	55.73	17.47
9)	ಮೈಸೂರು	173.41	88.37	203.93	86.93	198.79	84.81
10)	ಚಾಮರಾಜನಗರ	23.63	12.26	25.85	12.84	26.07	12.78
11)	ಮಂಡ್ಯ	52.83	22.68	59.34	24.42	52.55	17.48
12)	ಹಾಸನ	73.93	37.35	81.31	38.21	82.31	34.37
13)	ಮಂಗಳೂರು	229.27	110.78	265.75	133.92	262.72	119.61
14)	ಉಡುಪಿ	131.88	68.15	164.96	81.20	166.31	76.80
15)	ಉತ್ತರ ಕನ್ನಡ	104.09	52.55	121.10	59.79	107.32	44.05
16)	ಕೊಡಗು	31.39	19.00	33.25	18.47	30.85	16.38
17)	ಬೆಳಗಾವಿ	210.15	103.07	214.16	106.38	218.75	100.12
18)	ಬಿಜಾಪುರ	56.99	23.50	65.23	25.68	56.22	18.97
19)	ಬಾಗಲಕೋಟೆ	55.44	23.99	63.69	27.16	58.73	24.30

1	2	3	4	5	6	7	8
20)	ಧಾರವಾಡ	130.62	59.12	161.90	76.29	151.46	68.19
21)	ಕಾವೇರಿ	34.16	16.37	37.80	16.56	35.71	12.50
22)	ಗದಗ	37.43	18.32	45.49	22.42	41.56	15.43
23)	ಗುಲ್ಬರ್ಗಾ	80.03	40.06	101.25	43.24	73.50	26.72
24)	ಬೀದರ್	45.20	28.83	43.47	23.11	26.29	07.06
25)	ರಾಯಚೂರು	49.04	26.04	60.78	30.01	44.77	18.06
26)	ಕೊಪ್ಪಳ	22.94	12.01	25.43	12.04	23.55	08.64
27)	ಬಳ್ಳಾರಿ	69.40	34.03	83.62	36.85	78.55	36.78
	ಒಟ್ಟು	3156.08	1600.69	3748.00	1801.58	3578.58	1692.65

ಬೈಲಹೊಂಗಲ ನಗರದಲ್ಲಿ ಒಳಚರಂಡಿ ಯೋಜನೆ

345(551) - ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ(ಬೈಲಹೊಂಗಲ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ನಗರದ ಒಳಚರಂಡಿ ಯೋಜನೆಯ ಪ್ರಸ್ತಾವನೆ ಈಗ ಯಾವ ಹಂತದಲ್ಲಿದೆ?

ಆ) ಬೈಲಹೊಂಗಲ ನಗರದ ಕೊಳಚೆ ನೀರು ಮಲಪ್ರಭಾ ನದಿಗೆ ಹೋಗಿ ಸೇರುತ್ತಿದ್ದು ಅದನ್ನು ತಪ್ಪಿಸಲು ಕೇಂದ್ರ ಸರ್ಕಾರದ ನೆರವಿನಿಂದ ಹಾಗೂ ಪರಿಸರ ಇಲಾಖೆಯ ಸಹಕಾರದಿಂದ ಒಳಚರಂಡಿ ಯೋಜನೆಯನ್ನು ಕೈಗೊಳ್ಳಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯಮಂತ್ರಿಯವರು):

ಅ) ಬೈಲಹೊಂಗಲ ನಗರದ ಸಮಗ್ರ ಒಳಚರಂಡಿ ಯೋಜನೆಯನ್ನು ರೂ. 589.00 ಲಕ್ಷ ಗಳಿಗೆ ತಯಾರಿಸಲಾಗಿದೆ.

ಆ) ಈ ಪ್ರಸ್ತಾವನೆ ಸರ್ಕಾರ ಪರಿಶೀಲನೆಯಲ್ಲಿದೆ.

ಬೈಲಹೊಂಗಲ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ

346(552) - ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ(ಬೈಲಹೊಂಗಲ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?